


International Journal of Kannada Research
www.kannadajournal.com

**ISSN: 2454–5813**
IJKR 2018; 4(3): 139-143
© 2018 IJKR
www.kannadajournal.com
Received: 24-05-2018
Accepted: 25-06-2018

**Mahesha D**
Research Student and Assistant Professor Government Arts College Bangalore, Karnataka, India

**Dr. BK Ravi**
Professor, Dept. of Communication Bangalore University, Jnana Bharathi, Bangalore, Karnataka, India

**Correspondence**
**Mahesh D**
Research Student and Assistant Professor Government Art College Bangalore, Karnataka, India

# ಹವ್ಯಾಸಿ ರಂಗಭೂಮಿ ಮತ್ತು ರಂಗ ಸಂಘಟನೆಗೆ ಟಿ.ಸ್ ನಾಗಾಭರಣ ಅವರ ಕೊಡುಗೆ

**Mahesha D and Dr. BK Ravi**

**ಸಾರಲೇಖ:**
ಭಾರತೀಯ ರಂಗಭೂಮಿಯ ಉಗಮವನ್ನು ಸ್ಥಳೀಯ ಜನಪದರಲ್ಲಿ ಕಾಣಬಹುದು.ಇದು ಎಲ್ಲ ಸಂಸ್ಕೃತಿಗೂ ಸಾಮಾನ್ಯವಾದುದೇ.ಕಲೆಗಳ ಹುಟ್ಟೇ ಆ ಬಗೆಯದು, ಅದು ಪರಿಸರದ ಪರಿಣಾಮದಿಂದ ಮೂಡಿ ಬರುವಂಥದು. ಕ್ರಿ.ಪೂ.ಮೂರುಸಾವಿರ ವರ್ಷಗಳಷ್ಟು ಹಿಂದಿನ ಹರಪ್ಪಾ ಮತ್ತು ಮೊಹೆಂಜದಾರೊಗಳ ಸಿಂಧೂ ಸಂಸ್ಕೃತಿಯ ಎರಡು ಅಂಶಗಳು ಗಮನಾರ್ಹವಾಗಿವೆ.ಇಪ್ಪತ್ತನೇ ಶತಮಾನದ ಆರಂಭದಲ್ಲಿ ರಾಷ್ಟ್ರೀಯ ಭಾವನೆ ದೇಶಾದ್ಯಂತ ಹೊಸ ದೃಷ್ಟಿ ಹೊಸ ಉತ್ಸಾಹ ಮುಡಿತು. ಹಿನ್ನೆಲೆಯಲ್ಲಿ ಠಾಗೂರರ ನಾಟಕಗಳನ್ನು ಗಮನಿಸಬಹುದು.ಒಂದು ಕಡೆ ಪಾಶ್ಚಾತ್ಯ ಪ್ರಭಾವದ ರಂಗಭೂಮಿ; ಸಮಾನಾಂತರವಾಗಿಯೇ, ಬಂಗಾಳಿ ಮತ್ತು ಮರಾಠಿ ರಂಗಭೂಮಿಯಲ್ಲಿ ಪ್ರಾದೇಶಿಕ ವೈಶಿಷ್ಟ್ಯವುಳ್ಳ ದೇಶೀಯ ರಂಗ ಪ್ರಕಾರಗಳ ಪುನರುಜ್ಜೀವನ ಪ್ರಯತ್ನಗಳು.ಇಂದು ಠಾಗೂರರ ವಿಚಾರಗಳನ್ನು ಆದರ್ಶಪೂರ್ಣ ಭಾವುಕತೆಯೆಂದು ಭಾವಿಸಿದರೂ ಅವರು ಮೂಲತಃ ಸೃಜನಶೀಲರು, ಸ್ವತಂತ್ರ ಚಿಂತನೆ ನಡೆಸಿದವರು.ಶಾಂತಿನಿಕೇತನದಲ್ಲಿ ರಂಗ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಸ್ವತಃ ಭಾಗವಹಿಸಿದರು.ಅವರು ಬರೆದ ನಾಟಕಗಳು ಶುದ್ಧ ಭಾರತೀಯ, ಸಾಮಾಜೀಕವಾದರೂ ಆಧ್ಯಾತ್ಮಿಕ ವಿಚಾರಗಳಿಂದ ಕೂಡಿದವು.ಪಾಶ್ಚಾತ್ಯ ಮತ್ತು ಭಾರತೀಯ ಪರಂಪರೆ ಎರಡನ್ನು ಗಮನಿಸಿ ಹೊಸ ರೂಪ ಕಾಣುವ ಪ್ರಯತ್ನದವಾಗಿವೆ. ಭಾರತೀಯರಿಗೆ ಸಂಗೀತ, ನೃತ್ಯಗಳ ಮೂಲಕ ಅಭಿವ್ಯಕ್ತಗೊಳಿಸುವುದು ತೀರ ಸಹಜವೆಂದು ಭಾವಿಸಿದರು.ನೃತ್ಯಗಳ ಅಳವಡಿಕೆಯಲ್ಲೂ ದಕ್ಷಿಣ ಭಾರತ ಮತ್ತು ಮಣಿಪುರಿ ಪದ್ಧತಿಗಳನ್ನು ಅಭ್ಯಸಿಸಿದರು.ಪರಂಪರೆಯ ಉತ್ತಮಾಂಶಗಳನ್ನು ತಮ್ಮ ನಾಟಕಗಳಲ್ಲಿ ಅಳವಡಿಸಿದರು.ಅವರ ನೃತ್ಯ–ನಾಟಕಗಳಲ್ಲಿ ಗೇಯತೆ, ಲಯಗಳೇ ನಾಟಕೀಯ ಅಂಶಗಳಾದುವು.ಸಂಭಾಷಣೆಯಂತೆ ಅವೂ ನಾಟಕ ಗತಿಯ ಭಾಗವಾದು.ಅಭಿವ್ಯಕ್ತಿಯ ಮಧ್ಯಮವಾದುವು.

ಕನ್ನಡ ರಂಗಭೂಮಿ ಎಷ್ಟು ಪ್ರಾಚೀನವೆಂಬ ಪ್ರಶ್ನೆ ಎದುರಾದಾಗ ‘ಕವಿರಾಜ ಮಾರ್ಗ’ದಲ್ಲಿ ಬರುವ ‘ ಕುರಿಡೋದದೆಯುಂ ಕಾವ್ಯ ವಿದ್ಯಾ ಪ್ರಯೋಗ ಪರಿಣತ ಮತಿಗಳ್’ ಎಂಬ ಮಾತಿನಿಂದ ನಾಟ್ಯಕಲೆಯ ಪ್ರಾಚೀನತೆಯನ್ನು ಅಳೆಯುವ ಪ್ರಯತ್ನಗಳು ನಮ್ಮ ವಿದ್ವತ್ ಲೋಕದಲ್ಲಿ ನಡೆದಿರುವುದನ್ನು ಇಲ್ಲಿ ನೆನಸಬಹುದು. ಕನ್ನಡದಲ್ಲಿ ಹಿಂದೆ ನಾಟಕಗಳೇ ಇರಲಿಲ್ಲವೆಂಬ ಮಾತು ಗ್ರಂಥಸ್ಥ ಸಾಹಿತ್ಯದ ದೃಷ್ಟಿಯಿಂದ ಹೊರಟಿದ್ದೆಂದು ಕಾಣುತ್ತದೆ.ಆದರೆ ಗ್ರಂಥಸ್ಥ ನಾಟಕವೊಂದರ ಗೈರುಹಾಜರಿಯಲ್ಲಿಯೂ ರಂಗಭೂಮಿ ಇರಬಹುದು.ಇದಕ್ಕೆ ಈಗಿನ ರೂಪವಿಲ್ಲದಿದ್ದರೂ ನಮ್ಮ ಜನ ಸಮುದಾಯದ ಪ್ರತಿಭಾ ಪ್ರಕಾಶ ಹಾಗೂ ಅಭಿವ್ಯಕ್ತಿಯ ಅನಿವಾರ್ಯ ಅಂಗವಾಗಿ ರಂಗಭೂಮಿ ತುಂಬ ಹಿಂದೆಯೇ ರೂಪುಗೊಂಡಿರಬೇಕೆಂದು ಊಹಿಸಲು ಸಾಧ್ಯವಿದೆ.ಅನಕ್ಷರಸ್ಥರ ಅಭಿವ್ಯಕ್ತಿ ಅವರದೇ ವಿಶಿಷ್ಟ ಗೀತೆ, ಕತೆಗಳ ಮೂಲಕ ಆದಂತೆ ರಂಗಭೂಮಿಯ ಮೂಲಕವೂ ಆಗಿದೆಯೆಂಬುದಕ್ಕೆ ಇಂದು ನಮ್ಮೆದುರು ಇರುವ ಹಳ್ಳಿಗಾಡಿನ ರಂಗಭೂಮಿ ಸ್ಪಷ್ಟ ಸಾಕ್ಷಿಯಾಗಿದೆ.ಅಲ್ಲದೆ ‘ಹಗಲು ವೇಷ’ದಂಥ ಜನಪದ ಕಲೆಗಳು ರಂಗಭೂಮಿಯ ಪ್ರಕಾರಗಳೇ ಇನ್ನಬಹುದು.ಪಾರ್ಸಿ ಕಂಪನಿಗಳ ಪ್ರಭಾವ ಬಂಗಾಳಿ ಮರಾಠಿ ಮತ್ತು ಕನ್ನಡ ರಂಗಭೂಮಿಗಳ ಮೇಲೆ ಹೆಚ್ಚು ಕಡಿಮೆ ಏಕಕಾಲದಲ್ಲಿ ಉಂಟಾಯಿತು.ಈ ಪ್ರಭಾವ ಎಷ್ಟರಮಟ್ಟಿಗೆ ಆಯಿತೆಂದರೆ

ಕನ್ನಡದಲ್ಲಂತೂ ಪಾರ್ಸಿ ಕಂಪನಿಯ ಕೆಲವು ನಾಟಕಗಳನ್ನು ನಮ್ಮವರು ಅಳವಡಿಸಿಕೊಂಡರು.ಗುಬ್ಬಿ ಕಂಪನಿ ಬಹಳ ದಿನ ಪ್ರಯೋಗಿಸುತ್ತಿದ್ದ 'ಗುಲೇಬ ಕಾವಲಿ' ನಾಟಕ ಪಾರ್ಸಿ ಕಂಪನಿಯಿಂದ ಎರವಲು ಪಡೆದದ್ದು.

1906ರ ವೇಳೆಗೆ ಕನ್ನಡ ವೃತ್ತಿರಂಗಭೂಮಿಗೆ ಒಂದು ಸಪಷ್ಟ ರೂಪ ದೊರಕಿತು.ಇದಕ್ಕೆಮೊದಲು ನಾಟಕ ಸಂಘಗಳು ಯಾವಾಗಲೋ ಒಮ್ಮೆ ನಾಟಕಗಳನ್ನು ಪ್ರಯೋಗಿಸಿತ್ತಿದ್ದುವು.ಅರಮನೆಯಲ್ಲಿ ನಾಟಕ ಕಂಪನಿ ಪ್ರಾರಂಭವಾದ ಮೇಲೆ ವಾರಕ್ಕೆ ಒಂದು ದಿನ ಅಥವಾ ಎರಡು ದಿನ ಪ್ರದರ್ಶನಗಳನ್ನು ನೀಡುವ ಪರಿಪಾಠ ಪ್ರಾರಂಭವಾಯಿತು.ಮಂಡ್ಯ ರಂಗಚಾರ್ಯ ನಾಟಕ ಮಂಡಳಿ ಮತ್ತು ವರದಚಾರ್ಯರ ರತ್ನಾವಳಿ ಥಿಯೇಟ್ರಿಕಲ್ಸ್ ವಾರಕ್ಕೆ 2 ದಿನ ನಾಟಕಗಳನ್ನು ಪ್ರದರ್ಶಿಸುತ್ತಿದ್ದುವು.

**ಅಧ್ಯಯನದ ಉದ್ದೇಶ**

- ಹವ್ಯಾಸಿ ರಂಗಭೂಮಿಗೆ ಟಿ.ಎಸ್.ನಾಗಾಭರಣ ಅವರ ಕೊಡುಗೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.
- ರಂಗ ಸಂಘಟನೆಗೆ ಟಿ.ಎಸ್.ನಾಗಾಭರಣ ಅವರ ಕೊಡುಗೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

**ವಿಧಾನ**

ಈ ಸಂಶೋಧನಾ ಪ್ರಬಂಧದ ಅಧ್ಯಯನವು ಗುಣಾತ್ಮಕ ಸಂಶೋಧನಾ ವಿಧಾನ ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ.ಟಿ.ಎಸ್.ನಾಗಾಭರಣ ಅವರ ಹವ್ಯಾಸಿ ರಂಗಭೂಮಿಗೆ ಮತ್ತು ರಂಗಸಂಘಟನೆಗೆ ನೀಡಿದ ಕೊಡುಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಸಾಹಿತ್ಯಾ ಪರಾಮರ್ಶೆ**

ಪ್ರಸ್ತುತ ವಿಷಯಕ್ಕೆ ಸಂಬಂದಿಸಿದಂತೆಸಂಶೋಧನಾ ಕೃತಿಗಳ ಸಂಕ್ಷಿಪ್ತ ವಿಮರ್ಶಾನೋಟವನ್ನು ಇಲ್ಲಿ ಗಮನಿಸಲಾಗಿದೆ.

**"ಆಧುನಿಕ ಕನ್ನಡ ನಾಟಕ"** ಡಾ.ಕೆ. ಮರುಳಸಿದ್ದಪ್ಪ ಅವರ ಆಧುನಿಕ ಕನ್ನಡ ನಾಟಕವು ವಿಮರ್ಶಾತ್ಮಕ, ಐತಿಹಾಸಿಕ ವಿಶ್ಲೇಷಣೆಗಳನ್ನೊಳಗೊಂಡ ಸಂಶೋಧನಾ ಗ್ರಂಥವಾಗಿದೆ. ಕನ್ನಡ ರಂಗಭೂಮಿಯ ಪ್ರಾಚೀನತೆ, ಜನಪದ ರಂಗಭೂಮಿ, ಕನ್ನಡ ವೃತ್ತಿರಂಗಭೂಮಿ, ಆಧುನಿಕ ಪೂರ್ವ ಕನ್ನಡ ಅನುವಾದ, ರೂಪಾಂತರಗಳು ಕುರಿತಂತೆ ನವೋದಯ ಕಾಲದ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಹಿನ್ನೆಲೆಯಲ್ಲಿ ಹೊಸ ಕನ್ನಡ ನಾಟಕ ಹವ್ಯಾಸಿ ರಂಗಭೂಮಿ ಮುಂತಾದ ವಿಷಯಗಳ ಬಗ್ಗೆ ಮಾಡಿರುವ ವಿವೇಚನೆ ಪ್ರೌಢವೂ ಸಮಗ್ರವೂ ಆಗಿದೆ. ಸಂಸ, ಶ್ರೀರಂಗ, ಕೈಲಾಸಂ, ಪಿ.ಲಂಕೇಶ್ ಮುಂತಾದವರ ನಾಟಕಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ರಂಗಭೂಮಿ ಕುರಿತು ಅಧ್ಯಯನ ಮಾಡುವ ಸಂಶೋಧಕರಿಗೆ ಅತ್ಯುತ್ತಮ ಗ್ರಂಥವಾಗಿದೆ ಎನ್ನಬಹುದು.

**"ಕನ್ನಡ ರಂಗಭೂಮಿ ನಡೆದು ಬಂದ ದಾರಿ"** ಇದು ಬಿ.ಪುಟ್ಟಸ್ವಾಮಯ್ಯ ಅವರ ಕೃತಿಯಾಗಿದೆ.ಕನ್ನಡ ರಂಗಭೂಮಿಯು ನಡೆದು ಬಂದ ದಾರಿಯನ್ನು ಸಮಗ್ರವಾಗಿ ದಾಖಲಿಸುವ ಪ್ರಯತ್ನ ಮಾಡಿದ್ದಾರೆ.ಕನ್ನಡ ನಾಟಕಗಳ ಮೇಲೆ ಪಾಶ್ಚಾತ್ಯ ರಂಗಭೂಮಿಯು ಪ್ರಭಾವವನ್ನು ಬೀರಿರುವುದನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.ಕನ್ನಡ ರಂಗಭೂಮಿಯು ಹಂತ ಹಂತವಾಗಿ ಬೆಳವಣಿಗೆಯಾಗಿರುದನ್ನು ಕೃತಿಯಲ್ಲಿ ಗುರುತಿಸಬಹುದು.ರಂಗಭೂಮಿಯನ್ನು ಕುರಿತು ಅಧ್ಯಯನ ಮಾಡುವ ಸಂಶೋಧಕರಿಗೆ ಉತ್ತಮ ಕೃತಿಯಾಗಿದೆ.

**"ರಂಗಭೂಮಿ ಮತು ಸೌಂದರ್ಯ ಪ್ರಜ್ಞೆ"** ಇದು ಪ್ರೊ.ಎಂ.ಹೆಚ್. ಕೃಷ್ಣಯ್ಯ ಅವರ ಕೃತಿಯಾಗಿದೆ. ಹತ್ತೊಬತ್ತನೆಯ ಶತಮಾನದಲ್ಲಿ ಆಧುನಿಕ ಭಾರತೀಯ ರಂಗಭೂಮಿಯ ಚಟುವಟಿಕೆಗಳು ಪ್ರಾರಂಭವಾದವು. ಪಾಶ್ಚಾತ್ಯ ಪ್ರಭಾವ ಸಾಹಿತ್ಯ ಕ್ಷೇತ್ರದ ಮೇಲೆ ಆದಂತೆ ರಂಗಭೂಮಿ ಮೇಲೂ ಆಯಿತು.ನಂತರ ಬಂಗಾಳಿ, ಮರಾಠಿ, ಹಿಂದಿ ಸೇರಿದಂತೆ ಭಾರತೀಯ ಭಾಷೆಗಳ ಮೇಲೂ ಇದರ ಪ್ರಭಾವ ಆಗಿರುವುದನ್ನು ಗುರುತಿಸಿದ್ದಾರೆ. ಕನ್ನಡ ರಂಗ ಸಾಹಿತ್ಯ ಮತ್ತು ರಂಗಭೂಮಿ ಆಧುನಿಕ ನಾಟಕ ಸಾಹಿತ್ಯವು ಪೌರಾಣಿಕ ಮತ್ತು ಐತಿಹಾಸಿಕ ವಸ್ತು ಪರಿಕಲ್ಪನೆಗಳನ್ನು ಕುರಿತು ವಿಸ್ತಾರವಾಗಿ ಚರ್ಚಿಸಿದ್ದಾರೆ. ರಂಗಭೂಮಿ ಕುರಿತು ಅಧ್ಯಯನ ಮಾಡುವ ಸಂಶೋಧಕರಿಗೆ ಇದು ಅತ್ಯಂತ ಮಾಹಿತಿಪೂರ್ಣವಾದ ಕೃತಿಯಾಗಿದೆ.

**"ಕನ್ನಡ ರಂಗಭೂಮಿ–125"** ಡಾ.ಬಿ.ವಿ.ವೈಕುಂಠರಾಜು ಅವರು ಈ ಕೃತಿಯಲ್ಲಿ ಕನ್ನಡ ರಂಗಭೂಮಿಯ ಅರುಣೋದಯ, ಗುಬ್ಬಿ ಕಂಪನಿಯು ಸೇರಿದಂತೆ ನಾಡಿನ ವಿವಿಧ ನಾಟಕ ಕಂಪನಿಗಳ ಪರಿಚಯವನ್ನು ಸವಿಸ್ತಾರವಾಗಿ ನೀಡುಲು ಪ್ರಯತ್ನಿಸಿದ್ದಾರೆ. ನಾಟಕಕಾರರಾದ ಸಂಸ, ಕೈಲಾಸಂ, ಶ್ರೀರಂಗರು ನಾಟಕ ರಚನೆಗೆ ತೊಡಗಿಸಿಕೊಂಡಿದ್ದು, ನಂತರ ನಿರ್ದೇಶಕರ ಕಾಲದಲ್ಲಿ ಬಿ.ವಿ.ಕಾರಂತರು, ಪ್ರೇಮಕಾರಂತರ ರಂಗ ಪ್ರಯೋಗಗಳು, ಮಕ್ಕಳು ನಾಟಕಗಳು, ಹವ್ಯಾಸಿ ರಂಗಭೂಮಿ ಮತ್ತು ವಿಮರ್ಶಕ ಮುಂತಾದ ರಂಗಭೂಮಿಯ ಸಮಗ್ರ ನೋಟವನ್ನು ನೀಡಿದ್ದಾರೆ.ರಂಗಭೂಮಿ ಕುರಿತು ಅಧ್ಯಯನ ಮಾಡುವ ಸಂಶೋಧಕರಿಗೆ ಇದೊಂದು ಮಾರ್ಗದರ್ಶನ ನೀಡುವ ಕೃತಿಯಾಗಿದೆ.

**"ರಂಗಭೂಮಿ"** ಇದು ಎನ್.ಎಸ್.ವೆಂಕಟರಾಮ್ ಅವರ ಕೃತಿಯಾಗಿದೆ.ಆಧುನಿಕ ರಂಗಭೂಮಿಯಲ್ಲಿ ಪ್ರತಿನಾಟಕ ಪ್ರಯೋಗವೂ ಹೊಸ ಹೊಸ ಸವಾಲುಗಳನ್ನು ಒಡ್ಡುತ್ತದೆ. ಕ್ರಮವಾಗಿ ಪಾಶ್ಚಾತ್ಯ, ಭಾರತೀಯ ಮತ್ತು ರಂಗಭೂಮಿಯ ಪ್ರಯೋಗ, ಪಾಶ್ಚಾತ್ಯ ರಂಗಪರಂಪರೆ, ಭಾರತೀಯ ರಂಗಪರಂಪರೆಯ ಹಿನ್ನೋಟ ಮುನ್ನೋಟಗಳನ್ನು, ರಂಗಭೂಮಿಯ ಇತಿಹಾಸ ಮತ್ತು ಪ್ರಯೋಗಗಳನ್ನು ಕುರಿತು ವಿವರಿಸಿದ್ದಾರೆ. ರಂಗಭೂಮಿಯ ಅಧ್ಯಯನ ಆಸಕ್ತರಿಗೆ ಸಂಶೋಧನಾರ್ಥಿಗಳಿಗೆ ಉತ್ತಮವಾದ ಆಕರಗ್ರಂಥ ಎನ್ನಬಹುದು.

**ವಿಷಯ ವಿಶ್ಲೇಷಣೆ**

ಭಾರತೀಯ ರಂಗಭೂಮಿಯ ಉಗಮವನ್ನು ಸ್ಥಳೀಯ ಜನಪದರಲ್ಲಿ ಕಾಣಬಹುದು.ಇದು ಎಲ್ಲ ಸಂಸ್ಕೃತಿಗೂ ಸಾಮಾನ್ಯವಾದುದೇ.ಕಲೆಗಳ ಹುಟ್ಟೇ ಆ ಬಗೆಯದು, ಅದು ಪರಿಸರದ ಪರಿಣಾಮದಿಂದ ಮೂಡಿ ಬರುವಂಥದು. ಕ್ರಿ.ಪೂ.ಮೂರುಸಾವಿರ ವರ್ಷಗಳಷ್ಟು ಹಿಂದಿನ ಹರಪ್ಪಾ ಮತ್ತು ಮೊಹೆಂಜದಾರೊಗಳ ಸಿಂಧೂ ಸಂಸ್ಕೃತಿಯ ಎರಡು ಅಂಶಗಳು ಗಮನಾರ್ಹವಾಗಿವೆ. ಒಂದು ಆರ್ಯೇತರ ಮುಖಲಕ್ಷಣವುಳ್ಳ ದಪ್ಪ ತುಟಿಯ, ತೋಳ ತುಂಬ ಬಳೆ ತೊಟ್ಟ ನರ್ತಕಿಯ ಶಿಲ್ಪ, ನರ್ತಕಿಯದೆನ್ನಲು ಭಂಗಿ, ನಿಲುವು ಕಾರಣ. ಎರಡನೆಯದು, ಪಶುಪತಿಯ ಮುದ್ರೆ, ಲಿಂಗಗಳು.ಶಿವನೇ ಪಶುಪತಿ.ಅವನ ಲಾಂಛನ ಲಿಂಗ. ಲಿಂಗಪೂಜೆ ಬಹು ಪ್ರಾಚೀನವಾದುದು. ಹುಟ್ಟಿನ ಬಗೆಗಿನ ವಿಸ್ಮಯ ಲಿಂಗ ಪೂಜೆ ಹಾಗೂ ಸಂತಾನ ಮತ್ತು ಸಂಪದಭಿವೃದ್ಧಿಯ ಮಾತೃದೇವತೆಗಳ ಪೂಜೆಗೆ ಕಾರಣ.

**ಹವ್ಯಾಸಿ ರಂಗ ತಂಡಗಳು**

ನಾಟಕ ಮತ್ತು ಅದರ ರಂಗಪ್ರಯೋಗ–ಇವೆರಡೂ ಪರಸ್ಪರ ಅವಲಂಬಿಸಿವೆ. ಒಂದನ್ನು ಬಿಟ್ಟು ಇನ್ನೊಂದಿರಲಾರದು ಎನ್ನಬಹುದು.ನಾಟಕವು ರಂಗಭೂಮಿಯ ಮೇಲೆ ಪ್ರಯೋಗಗೊಂಡಾಗ ರೂಪು ತಾಳುವುದೇ ರಂಗಕೃತಿ.ರಂಗಕೃತಿಯ ನಿರ್ಮಾಣದಲ್ಲಿ ನಾಟಕಕಾರ, ನಿರ್ದೇಶಕ, ನಟರು, ರಂಗಭೂಮಿ ತಾಂತ್ರಿಕ ವರ್ಗದವರು ದುಡಿಯುತ್ತಾರೆ. ರಂಗಕೃತಿಯೊಂದರ ನಿರ್ಮಾಣದಲ್ಲಿ ಹಲವರ ಪ್ರತಿಭೆ ಒಗ್ಗೂಡಿ ಕೆಲಸ ಮಾಡುತ್ತದೆಯಾದರೂ ನಾಟಕಕಾರ ಮತ್ತು ನಿರ್ದೇಶಕರು ಉಳಿದವರಿಗಿಂತ ಹೆಚ್ಚಿನ ಹೊಣೆಗಾರಿಕೆಗೆ ಬದ್ಧರಾಗಿರುತ್ತಾರೆ, ಅದರ ಯಶಸ್ಸಿಗೆ ಕಾರಣರಾಗುತ್ತಾರೆ. ಕನ್ನಡ ರಂಗಭೂಮಿಯ ವಿಕಾಸಮಾರ್ಗದಲ್ಲಿ ಮೂರು ಪ್ರತ್ಯೇಕವಾದ ಪ್ರಮುಖ ಪರಂಪರೆಗಳನ್ನು ಗುರುತಿಸಬಹುದಾಗಿದೆ.ಜನಪದ ರಂಗಭೂಮಿ, ವೃತ್ತಿ ರಂಗಭೂಮಿ, ಮತ್ತು ಹವ್ಯಾಸಿ ರಂಗಭೂಮಿಯೆಂಬ ಈ ಮೂರು ಪರಂಪರೆಗಳಲ್ಲಿ ಹವ್ಯಾಸಿ ರಂಗಭೂಮಿಯೇ ಕೊನೆಯದು. ಹವ್ಯಾಸಿ ರಂಗಭೂಮಿಗೆ ಹಿನ್ನೆಲೆಯಾಗಿ ಜನಪದ ರಂಗಭೂಮಿ ಮತ್ತು ವೃತ್ತಿ ರಂಗಭೂಮಿಗಳಿವೆ. ಕನ್ನಡ ಹವ್ಯಾಸಿ ರಂಗಭೂಮಿಯು ಉಳಿದೆರಡು ಪರಂಪರೆಗಳಿಗಿಂತ ಭಿನ್ನವಾಗುವ ಪ್ರಮುಖ ಅಂಶವೆಂದರೆ ನಿರ್ದೇಶಕನಿಗೆ ವಿಶೇಷವಾದ ಮಹತ್ವವಿದೆ. ಕನ್ನಡ ಹವ್ಯಾಸಿ ರಂಗಭೂಮಿಯು, ಆಧುನಿಕ ಕನ್ನಡ ನಾಟಕಗಳ ಫಲವೇ ಆಗಿದೆ. ಹವ್ಯಾಸಿ ರಂಗಭೂಮಿಯಲ್ಲಿ ನಾಟಕ ಮತ್ತು ನಾಟಕಕಾರನ ಸಾಧನೆ, ಸಿದ್ಧಿಗಳಿಗೆ ಅತ್ಯಂತ ಮಹತ್ವ ಸಿಕ್ಕ ಕಾರಣದಿಂದ, ಇಲ್ಲಿ ನಾಟಕ ಕೃತಿಗಳ ಅಧ್ಯಯನವೇ, ರಂಗಭೂಮಿಯ ಅಧ್ಯಯನವೂ ಆಗುತ್ತದೆ. ಹವ್ಯಾಸಿ ರಂಗಭೂಮಿಯ ಇತಿಹಾಸವೆಂದರೆ ಆಧುನಿಕ ಕನ್ನಡ ನಾಟಕದ ಇತಿಹಾಸವೇ ಆಗಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ನಾಟಕಗಳ ವಿಶ್ಲೇಷಣೆಗೆ ಕೃತಿಗಳ ಅಧ್ಯಯನಕ್ಕೇ ವಿಶೇಷವಾಗಿ ಮಹತ್ವ ಕೊಡಲಾಗಿದೆ. ವಿಶೇಷವಾಗಿ ಮಹತ್ವ ಕೊಡಲಾಗಿದೆ.ಆಧುನಿಕ ಕನ್ನಡ ನಾಟಕ ಚಳುವಳಿ, ರಂಗಭೂಮಿಯಂತೆಯೇ ಸಾಹಿತ್ತಿಕ ಚಳುವಳಿಯೂ ಆಯಿತೆಂಬುದನ್ನೂ ಇಲ್ಲಿ ಗಮನಿಸಬೇಕು. ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸದೊಂದಿಗೆ ಹೊಂದಿಕೊಂಡೇ ಹೆಜ್ಜೆಯಿಟ್ಟಿರುವ 'ಆಧುನಿಕ ಕನ್ನಡ ನಾಟಕ'ದಲ್ಲಿಯಾ ನವೋದಯ ಪ್ರಗತಿಶೀಲ, ನವ್ಯ ಮಾರ್ಗಗಗಳನ್ನು ಗುರುತಿಸಬಹುದು. ಸಾಹಿತ್ಯದ ನೆಲೆಯಿಂದಲೇ 'ಆಧುನಿಕ ಕನ್ನಡ ನಾಟಕ'ವನ್ನು ವಿವೇಚಿಸುವ ಕಾರಣದಿಂದಲೂ ಮಹತ್ವ ಪ್ರಾಪ್ತವಾಗುತ್ತದೆ. 'ಆಧುನಿಕ ಕನ್ನಡ ನಾಟಕ'ದ ಪ್ರಯೋಗರಂಗವಾದ 'ಹವ್ಯಾಸಿ ರಂಗಭೂಮಿ'ಯ ಪರಿಚಯ ಅಗತ್ಯ.ಆಧುನಿಕ ಕನ್ನಡ ನಾಟಕ ವಿಕಾಸದ ಚರ್ಚೆಗೆ ಕೇವಲ ಸ್ವತಂತ್ರ ಕನ್ನಡ ನಾಟಕಗಳನ್ನು ಪರಿಗಣಿಸಿದರೆ ಸಾಕೆಂಬುದು ನಿಜವಾದರೂ ಕಾಲ ಕಾಲಕ್ಕೆ ಬಂದ ಶ್ರೇಷ್ಠ ಅನುವಾದ ಮತ್ತು ರೂಪಾಂತರಗಳೂ ಅಪ್ರತ್ಯಕ್ಷವಾಗಿ ಆಧುನಿಕ ಕನ್ನಡ ರಂಗಭೂಮಿಯನ್ನು ಮತ್ತು ನಾಟಕ ಸಾಹಿತ್ಯವನ್ನೂ ಪ್ರಭಾವಿಸಿವೆಯೆಂಬುದನ್ನು ಮರೆಯಬಾರದು.ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ನಾಟಕ ಪ್ರಮುಖವಾದುದು. ಒಂದೊಂದು ಸಂಸ್ಕೃತಿಗೂ ತನ್ನದೇ ಆದ ವಿಶಿಷ್ಟ ಪರಂಪರೆಯಿರುವುದಾದರೂ ಬಹುಪಾಲು ಎಲ್ಲ ಸಂಸ್ಕೃತಿಗಳಲ್ಲಿಯೂ ನಾಟಕದ ಹುಟ್ಟಿಗೆ ಕಾರಣವಾಗಿರುವ ಸಂದರ್ಭಗಳು ಏಕ ರೀತಿಯಲ್ಲಿವೆ. ಇದರಿಂದಾಗಿ ಹಾಡು, ಕುಣಿತಗಳು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಧಾರ್ಮಿಕ ವ್ರತಾಚರಣೆಗಳ ಅಂಗವಾಗಿ ಬಳಕೆಗೆ ಬಂದವು.ಪುರಾಣಗಳು, ಮಹಾಕಾವ್ಯಗಳು ರೂಪುಹೊಂದಿದ್ದು ಧರ್ಮದ ಪ್ರೇರಣೆಯಿಂದ.ನಾಟಕಗಳು ಪ್ರಾಚೀನ ಸಾಹಿತ್ಯ ವೃಕ್ಷದ ಕೊನೆಯ ಫಲಗಳು.ಈಗಾಗಲೇ ಸ್ಪಷ್ಟರೂಪು ತಾಳಿ ಸದೃಢವಾಗಿದ್ದ ನೃತ್ಯ, ಸಂಗೀತ, ಪುರಾಣ, ಮಹಾಕಾವ್ಯ–ಎಲ್ಲವನ್ನೂ ಬಳಸಿಕೊಂಡು ನಾಟಕ ಸಂಕೀರ್ಣವಾದ ಕಲೆಯಾಗಿ ಬೆಳೆಯಿತು.ಒಟ್ಟಾರೆ ಹೇಳುವುದಾದರೆ ಯಾವುದೇ ದೇಶದ ರಂಗಭೂಮಿ ಅಲ್ಲಿನ ಧಾರ್ಮಿಕ ಪರಂಪರೆಯ ಅಂಗವಾಗಿ ಹುಟ್ಟಿ, ಸಾಮಾಜಿಕವಾಗಿ ಬೆಳೆದಿದೆಯೆಂಬುದು ಸ್ಪಷ್ಟ ವಿಚಾರ.ನೃತ್ಯ, ಸಂಗೀತ, ಶಿಲ್ಪ ಮುಂತಾದ ಸಾಹಿತ್ಯೇಕರ ಕಲೆಗಳೂ ನಾಟಕದ ಪ್ರಮುಖವಾದ ಅಂಗಗಳು.

**ರಂಗ ಸಂಘಟನೆಗಳು**

ಕನ್ನಡದ ಯಶಸ್ವೀ ಸಿನಿಮಾ ನಿರ್ದೇಶಕರಾದ ಟಿ.ಎಸ್.ನಾಗಾಭರಣ ಅವರು ಮೂಲತಃ ರಂಗಭೂಮಿಯಿಂದ ಬಂದವರು. ಬಿ.ವಿ.ಕಾರಂತರ ಶಿಷ್ಯನಾಗಿ ನೇಪತ್ಯಗಾರನಾಗಿ ನಟನಾಗಿ ನಾಟಕ ಮತ್ತು ಸಿನಿಮಾ ನಿರ್ದೇಶಕನಾಗಿ ಬಹುಮುಖ ಪ್ರತಿಭೆಯುಳ್ಳ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ ಅಪರೂಪದ ವ್ಯಕ್ತಿಯಾಗಿದ್ದಾರೆ. ಅವರು ಬಿ.ವಿ.ಕಾರಂತರು ಮತ್ತು ಆದ್ಯರಂಗಾಚಾರ್ಯರಿಂದ ರಂಗಭೂಮಿಯ ದೀಕ್ಷೆಯನ್ನು ಪಡೆದು ನಂತರ ಸ್ನೇಹಿತರೊಂದಿಗೆ 'ಶತಶೈಲೂಷರು' ನಾಟಕ ತಂಡವನ್ನು ಕಟ್ಟಿಕೊಂಡರು. ಬಿ.ವಿ.ಕಾರಂತರ ನಾಟಕಗಳಿಗೆ ರಂಗ ವಿನ್ಯಾಸ, ನೇಪಥ್ಯ, ಸಹ ನಿರ್ದೇಶನ, ನಟನೆ ನಂತರ ನಿರ್ದೇಶನ ಹೀಗೆ ರಂಗಭೂಮಿಯ ಎಲ್ಲಾ ಹಂತಗಳನ್ನು ಒಂದೊಂದಾಗಿ ಏರತೊಡಗಿದರು. ಬಿ.ವಿ.ಕಾರಂತರು 'ಬೆನಕ' ನಾಟಕ ತಂಡವನ್ನು ಹುಟ್ಟುಹಾಕಿದಾಗ ಟಿ.ಎಸ್.ನಾಗಾಭರಣ ಅವರು ತಂಡದಲ್ಲಿ ಖಾಯಂ ಸದಸ್ಯರಾದರು. 'ಬೆನಕ' ತಂಡದಲ್ಲಿ ಬಿ.ವಿ.ಕಾರಂತರ ನಿರ್ದೇಶನದ ಅನೇಕ ನಾಟಕಗಳಲ್ಲಿ ನಟನಾಗಿ ರಂಗ ವಿನ್ಯಾಸಗಾರನಾಗಿ ನೇಪಥ್ಯಗಾರನಾಗಿ ಸಹ ನಿರ್ದೇಶಕನಾಗಿ, ನಿರ್ದೇಶಕನಾಗಿ ಕಾರ್ಯನಿರ್ವಹಿಸಿ ಇಂದಿಗೂ ತಂಡದ ನೇತೃತ್ವವನ್ನು ವಹಿಸಿಕೊಂಡು ಹಲವು ನಾಟಕಗಳನ್ನು ಯಶಸ್ವಿಯಾಗಿ ಸಂಘಟಿಸುತ್ತಾ ರಂಗ ಸಂಘಟಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. 'ಬೆನಕ ಮಕ್ಕಳ ರಂಗ ತಂಡ'ದ ಕಾರ್ಯಾಧ್ಯಕ್ಷರಾಗಿ ಕಳೆದ ಮೂವತ್ತು ವರ್ಷಗಳಿಂದ ಮಕ್ಕಳಿಗಾಗಿ ಪ್ರತಿ ವರ್ಷ ಮೂರು ಮಕ್ಕಳ ನಾಟಕಗಳನ್ನು ನಿರ್ದೇಶಿದಿದ್ದಾರೆ. ಪ್ರತೀವರ್ಷ ಬೆನಕ ಮಕ್ಕಳ ನಾಟಕೋತ್ಸವವನ್ನು ಸಂಘಟಿಸುವುದರೊಂದಿಗೆ ರಂಗ ಸಂಘಟಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಾಟಕ ಒಂದು ಸಂಕೀರ್ಣವಾದ ಕಲೆ. ಇಲ್ಲಿ ಒಂದು ನುರಿತ ರಂಗ ಕರ್ಮಿಗಳ ತಂಡವೇ ಕಾರ್ಯ ನಿರ್ವಹಿಸುತ್ತದೆ.ನಾಟಕ ಪ್ರಯೋಗದಲ್ಲಿ ಸಂಘಟನಕಾರ ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಾನೆ. ನಾಟಕದ ಪ್ರಯೋಗದ ಯಶಸ್ಸು ಸಂಘಟನಾಕಾರನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ ಎಂದರೆ ತಪ್ಪಾಗಲಾರದು.

ರಂಗಪ್ರಯೋಗಕ್ಕೆ ಸೂಕ್ತವಾದ ನಾಟಕವನ್ನು ನಾಟಕ ತಂಡವು ಆಯ್ಕೆಮಾಡಿದ ನಂತರ ರಂಗ ಸಂಘನೆಕಾರ ಕ್ರಿಯಾಶೀಲನಾಗುತ್ತಾನೆ. ರಂಗತಾಲೀಮು ಕೊಠಡಿ ಗೊತ್ತುಪಡಿಸುವುದು, ವಿವಿಧ ಪಾತ್ರಗಳ ಆಯ್ಕೆಯ ನಡೆಸಲು ನಟರನ್ನು ಒಂದೆಡೆ ಸೇರಿಸುವುದು, ಥಿಯೇಟರ್ ಗೊತ್ತುಪಡಿಸುವುದು ಸೂಕ್ತವಾದ ಪ್ರಚಾರವನ್ನು ಕೊಡುವುದು, ವಿವಿಧ ರಂಗಭೂಮಿಯ ತಜ್ಞರನ್ನು ಒಂದುಗೂಡಿಸಿ ನಾಟಕ ರಂಗವೇರಿ ಅದು ಯಶಸ್ವೀಯಾಗಿ ಪ್ರದರ್ಶನ ನೀಡಿ ಮುಕ್ತಾಯ ಆಗುವವರೆವಿಗೂ ಸಂಘಟನೆಕಾರನು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾನೆ. ರಂಗಭೂಮಿಯಲ್ಲಿ ರಂಗ ಮೇಲೆ ಮೆರಯುವ ಎಲ್ಲಾ ಪಾತ್ರಗಳಿಗಿಂತ ಸಂಘಟಕನ ಪಾತ್ರವು ಹೆಚ್ಚು ಪ್ರಾಮುಖ್ಯವಾಗಿದೆ. ಕಾರಣ ನಾಟಕ ಪ್ರಯೋಗಕ್ಕೆ ಅಗತ್ಯವಿರುವಷ್ಟು ಹಣಕಾಸ ವ್ಯವಸ್ಥೆ ಮಾಡುವುದು, ಪ್ರದರ್ಶನಕ್ಕೆ ಟಿಕೇಟ್ ಮಾರಾಟದ ವ್ಯವಸ್ಥೆ ಮಾಡುವುದು ಸೇರಿದಂತೆ ನಾಟಕದ ಸಮಸ್ತ ಆಗುಹೋಗುಗಳಿಗೂ ಸಂಘಟನೆಕಾರನೇ ಜವಾಬ್ದಾರನಾಗಿರುತ್ತಾನೆ. ಇಂತಹ ಗುರುತವಾದ ಕಾರ್ಯವನ್ನು ನಿರ್ವಹಿಸುವ 'ಸಂಘಟನೆಕಾರನನ್ನು' ಪಾಶ್ಚಾತ್ಯ ನಾಟಕ ರಂಗಭೂಮಿಯಲ್ಲಿ 'ಪ್ರೊಡ್ಯೂಸರ್' ಎಂದು ಕರೆಯುತ್ತಾರೆ.

ಭಾರತೀಯ ರಂಗಭೂಮಿಯಲ್ಲಿ ನಾಟಕದ ಪ್ರೊಡ್ಯೂಸರ್ ಅಂದರೆ

ನಮ್ಮ ಸಿನಿಮಾ ಪ್ರೊಡ್ಯೂಸರ್ ಇದ್ದ ಹಾಗೆ ಅಲ್ಲ. ನಾಟಕ ಪ್ರಯೋಗದ ಎಲ್ಲಾ ವಿವಿಧ ಹರಿತಗಳ ನಿರ್ವಹಣೆ, ಸಮಗ್ರೀಕರಣ ಮಾಡುವವನು ಅಂದರೆ ಒಂದು ರೀತಿಯಲ್ಲಿ ನಾಟಕ ಪ್ರಯೋಗಕ್ಕೆ ಸಂಬಂಧಿಸಿದ ಎಲ್ಲರನ್ನೂ, ಎಲ್ಲವನ್ನೂ ಹೊಂದಿಸಿಕೊಂಡು ನಾಟಕಕ್ಕೆ ತಂಡವನ್ನು ಕಟ್ಟಿಕೊಡುವವನ್ನು ನಾಟಕ ಪ್ರಯೋಗಕ್ಕೆ ಸಿದ್ದ ಪಡಿಸುವವನ್ನು ಎನ್ನಬಹುದು.

ಕನ್ನಡದ ಹವ್ಯಾಸಿ ರಂಗಭೂಮಿಯ ಸಂದರ್ಭದಲ್ಲಿ ಎಪ್ಪತ್ತು ಎಂಬತ್ತರ ದಶಕದಲ್ಲಿ ನಾಟಕಾರರಾದ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಪಿ.ಲಂಕೇಶ್, ಶ್ರೀರಂಗ, ಬಿ.ವಿ.ಕಾರಂತರು ಮುಂತಾದ ರಂಗಕರ್ಮಿಗಳು ಹವ್ಯಾಸಿ ಕಲಾವಿದರಿಂದ ಪ್ರಮುಖ ನಾಟಕಗಳನ್ನು ರಂಗಪ್ರದರ್ಶನಕ್ಕೆ ಮುಂದಾದರು.ಹಲವು ನವ್ಯ ಸಾಹಿತಿಗಳ ನಾಟಕಗಳು ರಂಗ ಪದ್ರರ್ಶನಗೊಂಡವು. ಈ ಅವಧಿಯಲ್ಲಿ ಬಿ.ವಿ.ಕಾರಂತರು ಅನೇಕ ನಾಟಕಗಳನ್ನು ತಮ್ಮ 'ಬೆನಕ' ನಾಟಕ ತಂಡ ಸೇರಿದಂತೆ ಬೆಂಗಳೂರಿನ ಹಲವು ನಾಟಕ ತಂಡಗಳಿಗೆ ನಾಟಕಗಳನ್ನು ನಿರ್ದೇಶಿಸಿದರು. ಈ ಸಂದರ್ಭದಲ್ಲಿ ಆರ್.ನಾಗೇಶ್, ಜೆ.ಲೋಕೇಶ್, ಚಂದ್ರಕುಮಾರ್ ಸಿಂಗ್, ಟಿ.ಎಸ್.ನಾಗಾಭರಣ ಮುಂತಾದವರು ನೇಪತ್ಯ, ರಂಗವಿನ್ಯಾಸಗೊಳಿಸುವ ಕಾರ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಹಾಗೂ ಅನೇಕ ನಾಟಕಗಳಿಗೆ ರಂಗ ಸಂಘಟಕರಾಗಿ ಕಾರ್ಯ ನಿರ್ವಹಿಸಿದರು.

ಉತ್ತಮ ರಂಗಸಂಘಟಕರಾದ ಇವರಲ್ಲಿ ಉತ್ತಮ ಅಭಿರುಚಿ, ನಿಷ್ಟೆ, ಶ್ರದ್ಧೆ ಹಾಗೂ ಅರ್ಪಣಾಭಾವನ್ನು ಕಾಣಬಹುದಾಗಿದೆ. ಇವರಲ್ಲಿದೆ ಕನ್ನಡದ ಹವ್ಯಾಸಿ ರಂಗಭೂಮಿಯಲ್ಲಿ ಶ್ರೀನಿವಾಸ, ಜಿ.ಕಪ್ಪಣ್ಣ, ರಮೇಶ್, ಗುಂಡಣ್ಣ, ನಾಗರಾಜ ಮೂರ್ತಿ, ಬಿ.ವಿ.ರಾಜಾರಂ ಮುಂತಾದ ರಂಗಸಂಘಟಕರ ಪರಂಪರೆಯು ಇಂದಿಗೂ ಮುಂದುವರೆಯುತ್ತಾ ಬಂದಿದೆ ಎನ್ನಬಹುದು. ರಂಗಭೂಮಿಯಲ್ಲಿ ಯಶಸ್ವಿಯಾದವರಲ್ಲಿ ಬಹಳಷ್ಟು ಮಂದಿ ಸಿನಿಮಾ ಕಲಾವಿದರಾಗಿ, ಸಿನಿಮಾ ನಿರ್ದೇಶಕರಾಗಿ, ಕಲಾ ನಿರ್ದೇಶಕರಾಗಿ ಕಿರುತೆರೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಆದರೆ ಕಲಾವಿದರು ಇಂದಿನ ಉನ್ನತ ಸ್ಥಾನಮಾನಕ್ಕೆ ಮೂಲ ವೇದಿಕೆಯಾಗಿದ್ದ ರಂಗಭೂಮಿಯ ನಂಟನ್ನು ಮುಂದುವರೆಸಿಕೊಂಡು ಬಂದವರು ತುಂಬಾ ಕಡಿಮೆ. ಇದಕ್ಕೆ ಅಪವಾದವೆಂಬಂತೆ ಟಿ.ಎಸ್.ನಾಗಾಭರಣ ಅವರು ಸಿನಿಮಾ ನಿರ್ದೇಶನ, ನಟನೆ, ದೂರದರ್ಶನದಲ್ಲಿ ಧಾರವಾಹಿಗಳ ನಿರ್ಮಾಣ ಮತ್ತು ನಿರ್ದೇಶನ ನಾಟಕಗಳ ನಿರ್ದೇಶನ, ನಟನೆ ಹೀಗೆ ರಂಗಭೂಮಿ, ಸಿನಿಮಾ ಧಾರಾವಾಹಿ ಮುಂತಾದ ಚಟುವಟಿಕೆಗಳಲ್ಲಿ ಸದಾ ಸಕ್ರಿಯರಾಗಿದ್ದಾರೆ.

ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಎಪ್ಪತ್ತು ಎಂಬತ್ತರ ದಶಕವು ಪ್ರಯೋಗಶೀಲ ಕಾಲವಾಗಿತ್ತು ಎನ್ನಬಹುದು. ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದ ಪಿ.ಲಂಕೇಶ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಸಿ.ಜಿ. ಕೃಷ್ಣಸ್ವಾಮಿ, ಕಿ.ರಂ.ನಾಗರಾಜು, ಗಿರಡ್ಡಿ ಗೋವಿಂದರಾಜು, ಸಿದ್ದಲಿಂಗಪಟ್ಟ ಶೆಟ್ಟಿ, ಮಾಲತಿ ಪಟ್ಟಣ ಶೆಟ್ಟಿ, ನಾಟಕಕಾರರಾದ ಗಿರೀಶ್ ಕಾರ್ನಾಡ್, ಆದ್ಯ ರಂಗಾಚಾರ್ಯ, ಬಿ.ವಿ.ಕಾರಂತ, ಕೆ.ವಿ. ಸುಬಣ್ಣ ಮುಂತಾದವರು ರಂಗ ಕರ್ಮಿಗಳು ವೈವಿಧ್ಯಮಯವಾದ ನಾಟಕಗಳನ್ನು ರಚಿಸಿ ಹವ್ಯಾಸಿ ರಂಗಭೂಮಿಯನ್ನು ಶ್ರೀಮಂತಗೊಳಿಸಿದರು.ಈ ಅವಧಿಯಲ್ಲಿ ಆಧುನಿಕ ಅದೂ ಬ್ರಿಡ್ಜ್ ನಾಟಕಗಳನ್ನಾಡುವ ಪ್ರಯತ್ನ ಮಾಡುತ್ತಾರೆ. ರಂಗ ಪರಿಕರ, ಸಂಗೀತ, ಪ್ರಸಾಧನ, ರಂಗತಂತ್ರ ಅಭಿನಯಗಳಲ್ಲಷ್ಟೆ ಪರಂಪರೆಯ ಶೈಲಿ ಕಂಡುಬರುತ್ತದೆ. ಇನ್ನು ವಸ್ತು, ವಿನ್ಯಾಸ, ರಂಗಚಲನೆ, ಬೆಳಕು ಮುಂತಾದವುಗಳಲ್ಲಿ ಆಧುನಿಕ ಶೈಲಿಯನ್ನು ಅಳವಡಿಸಿಕೊಂಡರು.ಈ ವೈವಿಧ್ಯಮವಾದ ವಸ್ತುವಿನ್ಯಾಸಗಳನ್ನೊಳಗೊಂಡ ನಾಟಕಗಳ ರಂಗ ಪ್ರಯೋಗಗಳು ಪ್ರೇಕ್ಷಕರನ್ನು ಆಕರ್ಷಿಸಿದವು.ನಾಟಕಕಾರರಿಗೆ ಮಾನ್ಯತೆಯನ್ನು ತಂದು ಕೊಟ್ಟವು ಹವ್ಯಾಸಿ ಕಲಾವಿದರು ರಂಗಭೂಮಿಯಲ್ಲಿ ಗುರ್ತಿಸಿಕೊಂಡರು ಹಾಗೂ ರಂಗಸಂಘಟಕರು ನಾಟಕಗಳ ಪ್ರದರ್ಶನಕ್ಕೆ ಅನಿವಾರ್ಯವಾದರು.ರಂಗಸಂಘಟನೆಯಲ್ಲಿ ಸಾಕಷ್ಟು ಕಲಾವಿದರು ಗುರುತಿಸಿಕೊಂಡರು.

ರಂಗಭೂಮಿಯು ನಾಟಕದ ಜೊತೆಗೆ ಬದುಕಿನಲ್ಲಿ ಶಿಸ್ತನ್ನು ಕಲಿಸಿಕೊಡುತ್ತದೆ ಎಂಬುದು ನಿರ್ವಿವಾದ. ಟಿ.ಎಸ್.ನಾಗಾಭರಣ ಅವರಿಗೆ ಕಾಲೇಜು ದಿನಗಳಲ್ಲಿ ಎಂ.ಎಸ್.ನಾಗಾರಾಜು ಅವರು ಶಿಸ್ತಿನ ಸೂತ್ರವಾದರು. ನಂತರ ಶ್ರೀರಂಗರು ಹಾಗೂ ಬಿ.ವಿ.ಕಾರಂತರು ನಡೆಸಿದ ರಂಗ ಶಿಬಿರಗಳಲ್ಲಿ ಭಾಗವಹಿಸಿದ ಮೇಲೆ ಅವರ ರಂಗಾಸಕ್ತಿಗೆ ವೇಗವನ್ನು ಪಡೆದುಕೊಂಡಿತು.ತಮ್ಮ ತಾತಂದಿರಿಂದ ತಮ್ಮನ್ನು ರಂಗಭೂಮಿಗೆ ತೆರೆದುಕೊಂಡ ಜರ ಸಂಪರ್ಕದಿಂದ ತಮ್ಮನ್ನು ರಂಗಭೂಮಿಗೆ ತೆರೆದುಕೊಂಡರು. ಅದರಿಂದ ಅವರೊಳಗಿದ್ದ ಕಲಾವಿದ ಸ್ಪಷ್ಟರೂಪ ಪಡೆದುಕೊಂಡು ರಂಗಭೂಮಿಯಲ್ಲಿ ಕ್ರಿಯಾಶೀಲರಾದರು ಎನ್ನಬಹುದು.

ರಂಗಭೂಮಿಗೆ ಬಂದವರಲ್ಲಿ ಬಹುತೇಕರು ನಟನೆಯನ್ನು ಮಾತ್ರಾ ಆಸಕ್ತಿಯನ್ನು ತೋರಿಸುತ್ತಾರೆ.ನಟನೆಯನ್ನು ಕಲಿತರೆ ರಂಗದಲ್ಲಿ ಮಿಂಚಿ ಹೆಸರು ಮಾಡಬಹುದು ಎಂದು ನಂಬಿರುತ್ತಾರೆ.ಆದರೆ ರಂಗಭೂಮಿಯಲ್ಲಿ ನಿಜಕ್ಕೂ ಜೀವದಾನ ನೀಡಬಲ್ಲ ರಂಗಸಂಘಟನೆಯ ಬಗೆ ಬಹುತೇಕರಿಗೆ ಆಸಕ್ತಿ ಕಡಿಮೆ. ಅದಕ್ಕೆ ಕಾರಣ ಒಬ್ಬ ನಟನನ್ನು ನಿರ್ದೇಶಕರನ್ನು, ನಾಟಕಕಾರರನ್ನು ಗುರ್ತಿಸುವ ಹಾಗೆ ರಂಗ ಸಂಘಟಕರನ್ನು ಗುರುತಿಸುವ ಪರಪಾಠ ನಮ್ಮಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಟಿ.ಎಸ್.ನಾಗಾಭರಣ ಅವರು ರಂಗಭೂಮಿಯಲ್ಲಿ ರಂಗವಿನ್ಯಾಸಕಾರನಾಗಿ, ನಟನಾಗಿ, ನಿರ್ದೇಶಕನಾಗಿ, ರಂಗಸಂಘಟಕರಾಗಿ ರಂಗಭೂಮಿಯ ಎಲ್ಲಾ ವಿಭಾಗಗಳಲ್ಲೂ ಅನುಭವಿಯಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇದು ಅವರ ವಿಶೇಷ ವ್ಯಕ್ತಿಯನ್ನಾಗಿ ಗುರುತಿಸುತ್ತದೆ.

ಶ್ರೀರಂಗರ ನೇತೃತ್ವದಲ್ಲಿ ಆಗ 'ಶತಶೈಲೂಷರು' ನಾಟಕ ತಂಡವನ್ನು ಕಟ್ಟಿಕೊಂಡಿದ್ದ ಟಿ.ಎಸ್.ನಾಗಾಭರಣ ಮತ್ತು ಅವರ ಗಳೆಯರು ಅಂದು ಬಹುತೇಕ ನಾಟಕಗಳಲ್ಲಿ ನೇಪಥ್ಯಗಾರನಾಗಿ ರಂಗವಿನ್ಯಾಸಗಾರನಾಗಿ, ರಂಗಸಂಘಟಕರಾಗಿ ದುಡಿದರು. ಆಗ ಎದುರಾದ ಹಲವು ರಂಗಭೂಮಿಯ ತಾಂತ್ರಿಕ ಸವಾಲುಗಳನ್ನು ತಮ್ಮ ಗುರುಗಳಾದ ಬಿ.ವಿ.ಕಾರಂತರ ಮಾರ್ಗದರ್ಶನದಲ್ಲಿ ಪ್ರಾಯೋಗಿಕವಾಗಿ ಅರಿತುಕೊಂಡರು. ಸಾಹಿತಿಗಳೂ ಹಾಗೂ ರಂಗಕರ್ಮಿಗಳಾದ ಗಿರೀಶ್ ಕಾರ್ನಾಡ್, ಬಿ.ವಿ.ಕಾರಂತ, ಚಂದ್ರಶೇಖರ ಕಂಬಾರ, ಕೆ.ಬಿ. ಚಂದ್ರಶೇಖರ್, ಪಿ.ಲಂಕೇಶ್ ಅವರೊಂದಿಗೆ ರಂಗಭೂಮಿಯ ಒಡನಾಟವು ನಾಟಕದಲ್ಲಿ ನೇಪಥ್ಯ, ರಂಗವಿನ್ಯಾಸ, ನಟನೆ, ನಿರ್ದೇಶನದ ರಂಗ ಸಂಘಟನೆಯ ಕೌಶಲ್ಯಗಳನ್ನು ಕಲಿತುಕೊಳ್ಳಲು ಅವಕಾಶವನ್ನು ಒದಗಿಸಿಕೊಟ್ಟಿತು.

ನಾಟಕವೆಂಬುದು ಸಂಕೀರ್ಣ ಕಲೆ ಹಾಗೂ ಸಾಮೂಹಿಕ ಕ್ರಿಯೆ. ಅದರ ಪ್ರಯೋಗದ ಯಶಸ್ಸಿನ ಹಿಂದೆ ಕಾಣದ ನೂರಾರು ಕೈಗಳು ಕೆಲಸ ಮಾಡುತ್ತವೆ. ರಂಗದ ಪ್ರಜ್ವಲ ಬೆಳಕಿನಲ್ಲಿ ಉಜ್ವಲವಾಗಿ ವಿರಾಜಿಸಲು ಅಪೇಕ್ಷಿಸುವ ನಟ ನಟಿಯರ ಪ್ರತಿಭಾ ಪ್ರಕಾಶದ ಹಿನ್ನೆಲೆಯಲ್ಲಿ ಕಾರ್ಯ ನಿರ್ವಹಿಸುವ ರಂಗಕರ್ಮಿಗಳು ರಂಗದ ಹಿಂದೆಯಿದ್ದುಕೊಂಡು ನಿರ್ಲಕ್ಷ್ಯಕ್ಕೆ ಒಳಗಾಗುವುದೇ ಹೆಚ್ಚು ಈ ನೇಪಥ್ಯ ಕಾರ್ಯದಲ್ಲಿ ಶ್ರದ್ಧೆಯಿಂದ ತಮ್ಮನ್ನು ತೊಡಗಿಸಿ ಕೊಳ್ಳುವವರು ಅತಿ ಕಡಿಮೆ. ಆದರೆ ಇವಕ್ಕೆ ಅಪವಾದವನ್ನು ರಂಗದ ಹಿಂದಿನ ಚಟುವಟಿಕೆಗಳು ಮತ್ತು ನಟನೆ, ರಂಗ ಸಂಘಟನೆ, ನಿರ್ದೇಶನಗಳಲ್ಲೂ ಸಾಧನೆ ಮಾಡಿರುವುದು ಟಿ.ಎಸ್.ನಾಗಾಭರಣ ಅವರ ಸಾಧನೆಯಾಗಿದೆ. ರಂಗಭೂಮಿಯ ತಾಂತ್ರಿಕ ಅಂಗ ಉಪಾಂಗ ಕಲೆಗಳಾದ ರಂಗಸಜ್ಜಿಕೆ, ರಂಗವಿನ್ಯಾಸ, ನೆರಳು, ಬೆಳಕು, ಪ್ರಸಾಧನ, ವರ್ಣಿಕೆ, ನಿರ್ದೇಶನ ಮತ್ತು ರಂಗ ಸಂಘಟನೆ ಮತ್ತಿತರ ರಂಗವ್ಯವಸ್ಥೆಯನ್ನು ಮಾಡುವುದರಲ್ಲಿ ಅವರಿಗೆ ವಿಶೇಷ ಆಸಕ್ತಿಯನ್ನು ರೂಢಿಸಿಕೊಂಡಿದ್ದಾರೆ.

ಅವರು 'ಬೆನಕ' ತಂಡದೊಂದಿಗೆ ಬಿ.ವಿ.ಕಾರಂತರ 'ಹಯವದನ' ನಾಟಕದ ಉತ್ತರಭಾರತ ಪ್ರವಾಸ ಕೈಗೊಂಡಾಗ ಇಡೀ ನಾಟಕದ ಸಂಘಟನೆಯ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಬೆಂಗಳೂರಿನ ವಿಜಯ ಕಾಲೇಜು ಹಾಗೂ ಮತ್ತಿತರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನಾಟಕದ ತರಬೇತಿಯನ್ನು ನೀಡಿ ರಂಗಪ್ರಯೋಗ ಮಾಡುವ ಸಂದರ್ಭದಲೆಲ್ಲಾ ಟಿ.ಎಸ್.ನಾಗಾಭರಣ ಅವರೇ ನಾಟಕದ ಸಂಘಟನೆ ಮತ್ತು ಸಹನಿರ್ದೇಶನದ ಜವಾಬ್ದಾರಿ ವಹಿಸಿಕೊಂಡು ಅತ್ಯಂತ ಯಶಸ್ವಿಯಾಗಿ ಪ್ರದರ್ಶನದ ವ್ಯವಸ್ಥೆ ಮಾಡುತ್ತಿದ್ದರು. ಇದು ತಮ್ಮ ಕಲಾ ಜೀವನದ ಸಾಧನೆಗೆ ಸಹಕಾರಿಯಾಯಿತು.

ಆಧುನಿಕ ಸಮಾಜದಲ್ಲಿ ಸಮೂಹ ಮಾಧ್ಯಮಗಳಾದ ರೇಡಿಯೋ, ಸಿನಿಮಾ ಹಾಗೂ ದೂರದರ್ಶನಗಳಿಂದ ಕುಸಿಯುತ್ತಿರುವ ರಂಗಭೂಮಿಯ ದುರಂತವನ್ನು ತಪ್ಪಿಸಬೇಕಾದರೆ ಹಾಗೂ ರಂಗಭೂಮಿಗೆ ಹೊಸ ಚೈತನ್ಯವನ್ನು ಕೊಡಬೇಕಾದರೆ ಮಕ್ಕಳಿಗೆ ರಂಗತರಬೇತಿ ಕೊಡುವುದು ಅನಿವಾರ್ಯ ಎಂದು ಭಾವಿಸಿದ ಪ್ರೇಮಕಾರಂತರು 'ಬೆನಕ ಮಕ್ಕಳ ತಂಡ'ವನ್ನು ಸ್ಥಾಪಿಸಿದರು. ಈ ನಾಟಕ ತಂಡದ ಗೌರವ ಅಧ್ಯಕ್ಷರಾಗಿ ಟಿ.ಎಸ್.ನಾಗಾಭರಣ ಅವರು ಸುಮಾರು ಮೂವತ್ತು ವರ್ಷಗಳಿಂದ ವರ್ಷಕ್ಕೆ ಮೂರು ನಾಟಕಗಳನ್ನು ಪ್ರದರ್ಶನವನ್ನು ಸಂಘಟಿಸುತ್ತಾ ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಇದು ಅವರ ರಂಗಸಂಘಟನೆ ಹಿಡಿದ ಕನ್ನಡಿಯಾಗಿದೆ.

ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಎಪ್ಪತ್ತರ ದಶಕವು ಹಲವು ಕಾರಣಗಳಿಂದ 'ಸುವರ್ಣಯುಗ'ವಾಗಿದೆ.ರಂಗದಿಗ್ಗಜರುಗಳಾದ ಶ್ರೀರಂಗರು ಬಿ.ವಿ.ಕಾರಂತರು ಪ್ರೇಮಕಾರಂತರು ಸಾಯಿಪರಾಂಜಪೆ, ಎನ್.ಎಸ್. ವೆಂಕಟರಾಂ ಮುಂತಾದವರು ಹವ್ಯಾಸಿ ರಂಗಭೂಮಿಗೆ ನವ ಚೈತನ್ಯವನ್ನು ನೀಡಿದರು. ಬಿ.ವಿ.ಕಾರಂತರು ನಾಟಕಗಳಲ್ಲಿ ವಸ್ತು ವಿನ್ಯಾಸಗಳಿಗೆ ತಕ್ಕಂತೆ ಸಂಭಾಷಣೆಗಳನ್ನು ಕಡಿಮೆ ಮಾಡಿ ಆಂಗಿಕ ಅಭಿನಯಕ್ಕೆ ಒತ್ತು ನೀಡಿದರು.ಶಬ್ದ, ಲೈಟಿಂಗ್, ನೆರಳು ಬೆಳಕಿನ ವಿನ್ಯಾಸವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡು ಹವ್ಯಾಸಿ ನಾಟಕಗಳತ್ತ ಪ್ರೇಕ್ಷಕರ ಗಮನವನ್ನು ಸೆಳೆದರು. ಹವ್ಯಾಸಿ ರಂಗಭೂಮಿಯಲ್ಲಿ ಬಿ.ವಿ.ಕಾರಂತರ ಶಿಷ್ಯರಾದ ಟಿ.ಎಸ್.ನಾಗಾಭರಣ ಅವರು ರಂಗಭೂಮಿ ಮತ್ತು ಸಿನಿಮಾ ನಿರ್ದೇಶನದ ತಾಂತ್ರಿಕ ಮತ್ತು ತಾಂತ್ರಿಕೇತರ ಕೌಶಲ್ಯಗಳನ್ನು ಜಾಣ್ಮೆಯಿಂದ ಕಲಿತುಕೊಂಡರು. ಅವಕಾಶಸಿಕ್ಕಿದಾಗ ಕಲಿತ ವಿದ್ಯೆಯನ್ನು ರಂಗಭೂಮಿ ಮತ್ತು ಸಿನಿಮಾ ಉದ್ಯಮದಲ್ಲಿ ಸೃಜನಾತ್ಮಕವಾಗಿ ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ.

ಅಲ್ಲದೆ ಹಲವು ನಾಟಕಗಳನ್ನು ಪ್ರಯೋಗಕ್ಕೆ ಸಂಘಟನೆ ಮಾಡಿದ್ದಾರೆ.ಪ್ರೇಮಕಾರಂತರ ನಂತರ 'ಬೆನಕ' ಮಕ್ಕಳ ನಾಟಕ ತಂಡವನ್ನು ಮುನ್ನಡೆಸುತ್ತಿದ್ದಾರೆ.ಮುಂದುವರೆದು ಭಾಪಾ ಅಂದರೆ 'ಭರಣ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್' ಸಂಸ್ಥೆಯನ್ನು ಸ್ಥಾಪಿಸಿ ಇಲ್ಲಿ ನುರಿತ ರಂಗತಜ್ಞರಿಂದ ರಂಗಭೂಮಿ, ಸಿನಿಮಾ, ದೂರದರ್ಶನಗಳಲ್ಲಿ ಆಸಕ್ತಿಯಿರುವವರಿಗೆ ಎರಡು ತಿಂಗಳ ಅಲ್ಪಾವಧಿಯ ತರಬೇತಿಯನ್ನು ನೀಡಲಾಗುತ್ತಿದೆ.ಈಗಾಗಲೇ ಎಂಡು ತರಬೇತಿಗಳನ್ನು ಪೂರೈಸಿ ತರಬೇತಿ ಅಂತ್ಯದಲ್ಲಿ ಕಾರ್ಯಾಗಾರ ಪ್ರಯೋಗದ ಅಂಗವಾಗಿ ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ. ಹೀಗೆ ಟಿ.ಎಸ್.ನಾಗಾಭರಣ ಅವರು ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿದ್ದು ರಂಗಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ.

## ಉಪಸಂಹಾರ

ಟಿ.ಎಸ್.ನಾಗಾಭರಣ ಅವರು ಮೂವತ್ತು ನಾಟಕಗಳಲ್ಲಿ ನಟಿಸಿದ್ದಾರೆ. ಅವುಗಳಲ್ಲಿ ಜನಪ್ರಿಯ ನಾಟಕಗಳಾದ ಸಂಗ್ಯಾಬಾಳ್ಯಾ, ಜೋಕುಮಾರಸ್ವಾಮಿ, ಹಯವದನ, ಕತ್ತಲೆ ಬೆಳಕು, ಗೋಕುಲ ನಿರ್ಗಮನ ಅವರ ರಂಗಭೂಮಿಯ ನಟನಾ ಪ್ರತಿಭೆಗೆ ಸಾಕ್ಷಿಯಾಗಿ ಕಂಡುಬರುತ್ತದೆ.ಭಾರತೀಯ ಸಮಾಜದ ಕಳಂಕ ಪ್ರಾಯದ ಜಾತಿ ಪದ್ಧತಿ. ಹೆಣ್ಣಿನ ಶೋಷಣೆ, ಸಾಮಾಜಿಕ ಸಮಸ್ಯೆಗಳಂತಹ ವಸ್ತು ವೈವಿಧ್ಯತೆಗಳನ್ನು ಮುಖ್ಯವಾಗಿ ಪ್ರತಿಬಿಂಬಿಸುವ ನಾಟಕಗಳನ್ನು ಪ್ರಯೋಗಿಸಿರುವ ಟಿ.ಎಸ್.ನಾಗಾಭರಣ ಅವರ ರಂಗ ಕೌಶಲ್ಯ ಗಮನಾರ್ಹವಾಗಿದೆ. ಟಿ.ಎಸ್.ನಾಗಾಭರಣ ಅವರು ಬಿ.ವಿ.ಕಾರಂತರ ನಂತರವೂ ಅವರು 'ಬೆನಕ' ನಾಟಕ ತಂಡಕ್ಕೆ ನಿರ್ದೇಶಿಸಿದ್ದ ನಾಟಕಗಳನ್ನು ಇಂದಿಗೂ 'ಬೆನಕ' ತಂಡದ ಕಲಾವಿದರಿಗೆ ನಿರ್ದೇಶಿಸುತ್ತಾ ಯಶಸ್ವಿಯಾಗಿ ಪ್ರದರ್ಶನ ನೀಡುತ್ತಿರುವುದು ಟಿ.ಎಸ್.ನಾಗಾಭರಣ ಅವರಿಗೆ ಕಾರಂತರ ಮೇಲಿರುವ ನಿಷ್ಠೆಯನ್ನು ತೋರಿಸುತ್ತದೆ. ಟಿ.ಎಸ್. ನಾಗಾಭರಣ ಅವರು ರಂಗಭೂಮಿಯ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಅವರ ಕಲೆಯ ಶಕ್ತಿಯ ಮೂಲ ರಂಗಭೂಮಿಯಾಗಿದೆ. ಟಿ.ಎಸ್.ನಾಗಾಭರಣ ಅವರನ್ನು ರಂಗಭೂಮಿಯ ಹಿನ್ನೆಲೆಯ ಸಿನಿಮಾ ನಿರ್ದೇಶಕ ಎನ್ನಬಹುದು. ಹಾಗೆಯೇ ಸಿನಿಮಾ ಅನುಭವವುಳ್ಳ ರಂಗಕರ್ಮಿ ಎಂದೂ ಕರೆಯಬಹುದು.ರಂಗಭೂಮಿಯ ದಟ್ಟವಾದ ಅನುಭವಗಳನ್ನು ಸಿನಿಮಾಗಳಲ್ಲಿ ಅಳವಡಿಸುವುದು ಟಿ.ಎಸ್.ನಾಗಾಭರಣ ಅವರ ವಿಶೇಷತೆಗಳಲ್ಲಿ ಗಮನಾರ್ಹವಾಗಿದೆ.

## ಪರಾಮರ್ಶನ ಗ್ರಂಥಗಳು

1. ರಂಗನಾಥ.ಹೆಚ್.ಕೆ. (2014) ಕರ್ನಾಟಕ ರಂಗಭೂಮಿ, ಬೆಂಗಳೂರು, ಹೇಮಂತ ಸಾಹಿತ್ಯ ಪ್ರಕಾಶನ.
2. ಲಿಂಗದೇವರುಹಳೆಮನೆ (2004) ರಂಗಸಂಪನ್ನರು ಸಿ.ಜಿ.ಕೃಷ್ಣಸ್ವಾಮಿ, ಬೆಂಗಳೂರು ಕರ್ನಾಟಕ ನಾಟಕ ಅಕಾಡೆಮಿ.
3. ವಸಂತಕುಮಾರ್ ಪೆರ್ಲ (2008) ಸ್ವಾತಂತ್ರೋತ್ತರ ಕನ್ನಡ ನಾಟಕಗಳಲ್ಲಿ, ಜಾನಪದ ಒಳನೋಟ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್.
4. ವೆಂಕಟರಾಮ್ ಎನ್.ಎಸ್. (2001) ರಂಗಭೂಮಿ, ಬೆಂಗಳೂರು, ನವಕರ್ನಾಟಕ ಪಬ್ಲಿಕೇಷನ್ಸ್.
5. ವೈಕುಂಠರಾಜು.ಬಿ.ವಿ. (2004) ಸಿನಿಮಾತು, ಬೆಂಗಳೂರು, ಸನತ್ ಪ್ರಕಾಶನ.
6. ವೈಕುಂಠರಾಜು.ಬಿ.ವಿ. (2007) ಕನ್ನಡ ರಂಗಭೂಮಿ–125, ಬೆಂಗಳೂರು, ಸನತ್ ಪ್ರಕಾಶನ.
7. ವೈದೇಹಿ (2013) ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಬೆಂಗಳೂರು, ಅಭಿನವ ಪ್ರಕಾಶನ.
8. ಶಾಮರಾಯ ತ.ಸು (1962) ಕನ್ನಡ ನಾಟಕ, ಮೈಸೂರು, ಗೀತಾ ಬುಕ್‌ಹೌಸ್.
9. ಸತೀಶ್‌ಶಿಲೆ (2004) ರಂಗಸಂಪನ್ನರು ಡಾ.ಬಿ.ವಿ. ವೈಕುಂಠರಾಜು, ಬೆಂಗಳೂರು, ಕರ್ನಾಟಕ ನಾಟಕ ಅಕಾಡೆಮಿ.